## ಮರಿಮಕ್ಕಳನ್ನೂ ನೋಡಬಹುದೇ?

ಝೀ ಕನ್ನಡದ ‘ಪುಟ್ಟಕ್ಕನ ಮಕ್ಕಳು’ ಧಾರಾವಾಹಿ ಪ್ರಾರಂಭದಲ್ಲಿ ಆಶಾದಾಯಕವಾಗಿ ಸಾಗುತ್ತಿತ್ತು. ಬರುಬರುತ್ತಾ ವೀಕ್ಷಕರಿಗೆ ತಲೆನೋವು ಉಂಟುಮಾಡುತ್ತಿದೆ. ಪುಟ್ಟಕ್ಕನಿಗೆ ಮರಿಮಕ್ಕಳು ಬಂದರೂ ಈ ಧಾರಾವಾಹಿಗೆ ಮುಕ್ತಿ ಎನ್ನುವುದು ಸಿಗುವುದಿಲ್ಲ ಎಂದು ಅನ್ನಿಸುತ್ತದೆ. ಇದರ ಬದಲಿಗೆ ವಿಶಿಷ್ಟ ಕಥೆಗಳ ಧಾರಾವಾಹಿಯನ್ನು ನೀಡುವಂತಾದರೆ ಚಂದ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಭಾಗ್ಯ: ಯಾಕೆ ದ್ವಂದ್ವ?

ಕಲರ್ಸ್ ಕನ್ನಡದ ‘ಭಾಗ್ಯಲಕ್ಷ್ಮೀ’ ಧಾರಾವಾಹಿಯ ಕಥಾನಾಯಕಿ ಭಾಗ್ಯ ತನಗೆ ಬರುವ ಎಲ್ಲ ಸಮಸ್ಯೆಗಳನ್ನೂ ದಿಟ್ಟತನದಿಂದ ಎದುರಿಸುವ ಬಗೆ ನೋಡಿದಾಗ ಮೆಚ್ಚುಗೆ ಆಗುತ್ತದೆ. ಇನ್ನೊಂದು ಕಡೆ ತಾಂಡವ್ ಆಫೀಸಿನಲ್ಲಿ ಎಲ್ಲರ ಮುಂದೆ ಅವಳನ್ನು ಹೀಯಾಳಿಸುವುದು ಅತಿರೇಕ ಅನ್ನಿಸುತ್ತದೆ. ಸುನಂದಾ, ಕಿಶನ್ ನಡತೆಯ ಬಗ್ಗೆ ಮಾತಾಡುವಾಗ, ಅವಳ ಮಾತಿನ ಬಗ್ಗೆ ಯಾರಿಗೂ ಸಂದೇಹ ಬರುವುದಿಲ್ಲವಾ? ಅವಳಿಗೆ ಪರಿಚಯವೇ ಇಲ್ಲದ ಕಿಶನ್ ಬಗ್ಗೆ ಯಾರೂ ಪ್ರಶ್ನಿಸದೇ ಇದ್ದರೆ ಅಸಂಬದ್ಧ ಎಂದೇ ಅನ್ನಿಸುತ್ತದೆ.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

## ಸಿನಿಮಾ ಹೆಸರು ಕಡ, ಕಥೆ ಜಡ!

ಹಿಂದೆ ಜನಪ್ರಿಯವಾಗಿದ್ದ ಸಿನಿಮಾ ಹೆಸರನ್ನೇ ಸ್ವಲ್ಪ ಬದಲಾವಣೆ ಮಾಡಿಕೊಂಡು ಕಿರುತೆರೆಯ ಧಾರಾವಾಹಿಗಳಿಗೆ ನಾಮಕರಣ ಮಾಡುತ್ತಿದ್ದಾರೆ. ಮೂಲ ಜನಪ್ರಿಯ ಹೆಸರಿಗೂ ಕಥೆಗೂ ಸಂಬಂಧ ಇಲ್ಲದಿದ್ದರೂ ಆ ರೀತಿಯ ಅನುಕರಣೆ ದಟ್ಟವಾಗಿ ಕಾಣಿಸುತ್ತಿದೆ. ‘ನಾ ನಿನ್ನ ಬಿಡಲಾರೆ’, ‘ಶ್ರಾವಣಿ ಸುಬ್ರಮಣ್ಯ’, ‘ಅವನು ಮತ್ತು ಶ್ರಾವಣಿ’, ‘ನಿನಗಾಗಿ’, ‘ನಿನ್ನ ಜೊತೆ ನನ್ನ ಕಥೆ’, ‘ಆಸೆ’, ‘ನೂರೂ ಜನ್ಮಕೂ’, ‘ಅಣ್ಣಯ್ಯ’, ‘ಸಂಧ್ಯಾ ರಾಗ’, ‘ಶಾಂಭವಿ’, ‘ಬ್ರಹ್ಮಗಂಟು’, ‘ಮುದ್ದು ಸೊಸೆ’… ಬಹುಪಾಲು ಕನ್ನಡ ಸಿನಿಮಾದ ಹೆಸರುಗಳೇ ಆಗಿವೆ.

‘ಅನುಪಮಾ’, ‘ಅನ್ನಪೂರ್ಣ’, ‘ಸಿಂಧು ಭೈರವಿ’, ‘ನಾತಿಚರಾಮಿ’, ‘ಯಜಮಾನ’, ‘ಪ್ರೀತಿಗಾಗಿ’ ಮೊದಲಾದ ಹೆಸರುಗಳೂ ಅಷ್ಟೇ. ವೀಕ್ಷಕರ ಸಹನೆಯನ್ನು ಪರೀಕ್ಷಿಸುತ್ತಿರುವ ‘ರಾಮಾಚಾರಿ’, ಅಳುತ್ತಲೇ ಸಾಗುತ್ತಿರುವ ‘ಭಾಗ್ಯಲಕ್ಷ್ಮೀ’ ಕೂಡ ಇದಕ್ಕೆ ಹೊರತಾಗಿಲ್ಲ. ಒಟ್ಟಿನಲ್ಲಿ ಈ ಧಾರಾವಾಹಿಗಳ ಹೆಸರಿನಲ್ಲಿ ಹೊಸತನ ಕಾಣೆಯಾಗಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಕಪಾಳಮೋಕ್ಷಕ್ಕೆ ಬೇಕು ಕಾನೂನು ಪೆಟ್ಟು

ಶಾಲೆ ಎಂದರೆ ನೆನಪಿಗೆ ಬರುವುದು ಶಾಲೆಯ ಮೇಷ್ಟ್ರು ಹಾಗೂ ಕೈಯಲ್ಲಿ ಬೆತ್ತ ಎನ್ನುವ ಭಾವನೆ ಒಂದು ಕಾಲದಲ್ಲಿತ್ತು. ಆಗ ಮಕ್ಕಳ ಮೇಲೆ ಗುರುಗಳಿಗೆ ಸಂಪೂರ್ಣ ನಿಯಂತ್ರಣ ಇತ್ತು.

ಕಿರುತೆರೆಯ ಬಹುತೇಕ ಧಾರಾವಾಹಿಗಳಲ್ಲಿ ಆದರ್ಶ ಪತ್ನಿ ಎಲ್ಲ ರೀತಿಯ ದೌರ್ಜನ್ಯ ಮತ್ತು ಅವಮಾನಗಳನ್ನು ಸಹಿಸಿಕೊಳ್ಳುವ ಮಹಿಳೆ. ಧಾರಾವಾಹಿಗಳ ಚಿತ್ರ ಕಥೆಗಾರರು ಮತ್ತು ನಿರ್ದೇಶಕರು ಇನ್ನೊಬ್ಬ ವ್ಯಕ್ತಿಗೆ ಕಪಾಳಮೋಕ್ಷ ಮಾಡುವ ಹಕ್ಕಿಲ್ಲ ಎಂಬ ಕಲ್ಪನೆಯನ್ನು ಗ್ರಹಿಸಲು ವಿಫಲರಾಗಿದ್ದಾರೆ. ಕಪಾಳಮೋಕ್ಷ ಮಾಡುವುದು ಎಂದರೆ ದೊಡ್ಡ ಅವಮಾನ ಮಾಡಿದಂತೆ.

ಕಪಾಳಮೋಕ್ಷದಿಂದ ಕಿವಿಗೆ ಏಟು ತಗುಲಿದರೆ ಪ್ರಾಣಕ್ಕೆ ಅಪಾಯವಾಗುವ ಸಂಭವ ಇದೆ ಎಂದು ಹೇಳುತ್ತಾರೆ. ಆದರೆ ಬಹುತೇಕ ಧಾರಾವಾಹಿ ಮತ್ತು ರಿಯಾಲಿಟಿ ಶೋಗಳಲ್ಲಿ ಕಪಾಳಮೋಕ್ಷ ಮತ್ತು ಕೋಲಿನಿಂದ ಹೊಡೆಯುವುದು ‘ಫಟ್ ಫಟ್’ ದನಿ ತಮಾಷೆಯ ವಿಷಯವಾಗಿದೆ. ಇದು ನಿಜವಾಗಿ ಹೊಡೆಯುವುದಲ್ಲ – ನಟನೆ ಎಂದು ಗೊತ್ತಿದ್ದರೂ ವೀಕ್ಷಕರಿಗೆ, ಅದರಲ್ಲೂ ಮಕ್ಕಳಿಗೆ ಮನಸ್ಸಿಗೆ ನೋವು ಆಗುತ್ತದೆ. ಶಾಲೆಗಳಲ್ಲಿ ಮಕ್ಕಳನ್ನು ಬೆತ್ತದಿಂದ ಹೊಡೆಯುವುದು, ಕೆನ್ನೆಗೆ ಬಾರಿಸುವುದು, ಕಿವಿ ಹಿಂಡುವುದು, ಬೆನ್ನ ಮೇಲೆ ಗುದ್ದುವುದು ಕಾನೂನುಬಾಹಿರ ಆಗಿರುವಂತೆ ಧಾರಾವಾಹಿಗಳಲ್ಲಿ ಕಪಾಳಮೋಕ್ಷ ನಿಷೇಧಗೊಳ್ಳಲಿ.

—ವೀಣಾ ಶಂಕರ್, ಬೆಂಗಳೂರು

## ಡೂಪ್ಲಿಕೇಟ್ ಸರ್ಟಿಫಿಕೇಟ್ ತರಿಸಿ ಕೆಲಸ ಕೊಡಿಸಿ

ಝೀ ಕನ್ನಡದ ‘ಅಣ್ಣಯ್ಯ’ದಲ್ಲಿ ಪಾರುಳ ವೈದ್ಯಕೀಯ ಪ್ರಮಾಣ ಪತ್ರವನ್ನು ಹರಿದು ಹಾಕುವುದು ಮಾದರಿಯ ನಡೆಯಲ್ಲ. ಹೆಣ್ಣುಮಕ್ಕಳ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಉತ್ತೇಜಿಸುವಂತೆ ಕತೆಗೆ ತಿರುವು ನೀಡಲು ಇದು ಸಕಾಲ. ನಾಶ ಮಾಡಿದ ಪ್ರಮಾಣ ಪತ್ರವನ್ನು ದ್ವಿತೀಯ ಪ್ರತಿಯನ್ನು ಪಡೆದು ಉದ್ಯೋಗಸ್ಥಳನ್ನಾಗಿ ಮಾಡಿ ಸಮಾಜಕ್ಕೆ ಉತ್ತಮ ಸಂದೇಶ ನೀಡಬಹುದು. ಕಳೆದ ಪ್ರಮಾಣ ಪತ್ರ ಪಡೆಯುವ ಬಗ್ಗೆಯೂ ತಿಳಿಸದಂತೆ ಆಗುತ್ತದೆ.

—ಮಧುಲತಾ ಕುರುಬರಹಳ್ಳಿ, ಹೊಸಕೋಟೆ

## ಭಾರತಾಂಬೆಗೆ ಸಂಗೀತದ ಗೌರವ

ಝೀ ಕನ್ನಡದ ‘ಸರಿಗಮಪ’ ರಿಯಾಲಿಟಿ ಶೋನ ಇತ್ತೀಚಿನ ಸಂಚಿಕೆಯಲ್ಲಿ ಸ್ಪರ್ಧಿಗಳು ಜಾನಪದ, ಭಾವಗೀತೆ, ಸಿನಿಮಾಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ರಂಜಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿ ಶರಣ್ ಸಂಚಿಕೆಗೆ ಮೆರುಗು ತಂದರು. ಕಾರ್ಯಕ್ರಮದಲ್ಲಿ ಅರ್ಜುನ್ ಜನ್ಯ ಅವರ ಜನ್ಮದಿನವನ್ನು ಆಚರಿಸಿದ್ದು ವಿಶೇಷವಾಗಿತ್ತು. ಗಾಯಕ ಬಾಳು ಬೆಳಗುಂದಿ ‘ಆಪರೇಷನ್ ಸಿಂಧೂರ್’ ಕಾರ್ಯಾಚರಣೆಯ ಸ್ಮರಣಾರ್ಥ ದೇಶಭಕ್ತಿ ಗೀತೆ ಹಾಡಿ ಭಾರತಾಂಬೆಗೆ ಗೌರವ ಸಲ್ಲಿಸಿದ್ದು ಹೆಮ್ಮೆಯನ್ನು ಮೂಡಿಸಿತು.

—ಭಾರತೀ ಗಂಗಾಧರ್, ಬೆಂಗಳೂರು



‘ಸರಿಗಮಪ’ದಲ್ಲಿ ಆಗಮ ಶಾಸ್ತ್ರಿ, ದೀಪಕ್ ಇಬ್ಬರನ್ನೂ ಎಲಿಮಿನೇಟ್ ಮಾಡಿದರು. ಆಗಮ ಶಾಸ್ತ್ರಿ ಚೆನ್ನಾಗಿ ಹಾಡುತ್ತಿದ್ದಳು. ದೀಪಕ್ ಕೂಡ ಒಳ್ಳೆಯ ಗಾಯಕ. ಇಬ್ಬರೂ ಎಲಿಮಿನೇಟ್ ಆದುದು ಬೇಸರ ಅನ್ನಿಸಿತು.

—ಕೆ.ಎನ್. ಅಂಜನಾ, ಚಾಮರಾಜನಗರ

ಝೀ ಕನ್ನಡದ ‘ಸರಿಗಮಪ’ ಕಾರ್ಯಕ್ರಮದಲ್ಲಿ ಆರಾಧ್ಯ ರಾವ್, ‘ಜೀವನ ಚೈತ್ರ’ ಸಿನಿಮಾದ ನಾದಮಯ… ಗೀತೆಯನ್ನು ಅಮೋಘವಾಗಿ ಹಾಡಿ ಫಿನಾಲೆಗೆ ಪ್ರವೇಶ ಪಡೆದ. ಆತನ ಗಾಯನಕ್ಕೆ ಇಡೀ ವೇದಿಕೆ ಎದ್ದು ನಿಂತು ಕರತಾಡನ ಮಾಡಿ ಅಭಿನಂದಿಸಿತು. ನನಗೂ ಸಹ ಆಕೆಯ ಗಾಯನ ಪ್ರತಿಭೆಗೆ ಕಣ್ಣಂಚಲ್ಲಿ ನೀರು ಚಿಮ್ಮಿತು.

—ಮಂಜುನಾಥ್ ಸಿ. ನೆಟ್ಕಲ್, ಬೆಂಗಳೂರು

‘ಸರಿಗಮಪ’ ಕಾರ್ಯಕ್ರಮ ರಿಯಾಲಿಟಿ ಶೋಗಳಲ್ಲಿ ಒಂದು ದಾಖಲೆಯನ್ನೇ ನಿರ್ಮಿಸಿದೆ. ಇದುವರೆಗಿನ ಸರಣಿಗಳನ್ನು ನೋಡಿದರೆ ಸೆಮಿಫೈನಲ್ಸ್, ಫೈನಲ್ಸ್ ಹಂತಗಳಲ್ಲಿ ಸ್ಪರ್ಧಿಗಳು ಕೇವಲ ಏಕತಾನತೆಯ ಹಾಡುಗಳನ್ನೇ ಹಾಡುತ್ತಿದ್ದಾರೆ. ‘ಕಠಾರಿವೀರ’, ‘ಸಂಧ್ಯಾರಾಗ’, ‘ಭಕ್ತ ಕನಕದಾಸ’, ‘ಭಕ್ತ ಕುಂಬಾರ’ ಸಿನಿಮಾಗಳ ಹಾಡುಗಳನ್ನು ಅಂತಿಮ ಹಂತದ ಸ್ಪರ್ಧೆಯಲ್ಲಿ ಕೇಳುವ ಕುತೂಹಲವಿದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ